ಅದು ಸರ್ಕಾರದ ಹಣ ನೋಡಿ. ಅವರ ಸ್ವಂತ ಹಣವಲ್ಲವಲ್ಲ. ಅದು ವ್ಯಾಪಕವಾಗಿ ಹಬ್ಬಿರತಕ್ಕ ವ್ಯಾಧಿಯಾಗಿದೆ. ಅದಕ್ಕೆ ನಾವೆಲ್ಲರೂ ಕುಳಿತು ಒಂದು ಪರಿಹಾರ ಕಂಡುಹಿಡಿಯೋಣ.

ಶ್ರೀ ಎನ್. ಯೋಗೀಶ್ ಭಟ್ : ಮಾನ್ಯ ಅಧ್ಯಕ್ಷರೆ, ಅನೇಕ ಜಿಲ್ಲಾ ಕೇಂದ್ರಗಳಲ್ಲಿ ಇಂಟರ್‌ನೆಟ್ ವ್ಯವಸ್ಥೆ ಮಾಡಿದರೆ ಹೆಚ್ಚು ಉಪಯೋಗವಾಗಬಹುದು. ಸಂಚಾರಿ ಗ್ರಂಥಾಲಯಗಳೇನಿವೆ ಅದು ಗ್ರಾಮಾಂತರ ಪ್ರದೇಶಗಳಿಗೂ ಹೋಗುವಂತೆ ಹೆಚ್ಚು ಸಂಚಾರಿ ಗ್ರಂಥಾಲಯಗಳನ್ನು ಮಾಡಬೇಕು. ಮಳೆಗಾಲದಲ್ಲಿ ಅನೇಕ ಗ್ರಂಥಾಲಯದ ಕಟ್ಟಡಗಳು ಸೋರುತ್ತಿವೆ. ಅವನ್ನು ತಕ್ಷಣ ದುರಸ್ತಿಗೊಳಿಸಲು ಕ್ರಮ ತೆಗೆದುಕೊಳ್ಳಬೇಕು.

ಅಧ್ಯಕ್ಷರು : ಇವೆಲ್ಲವೂ ಯೋಗ್ಯವಾದ ಸಲಹೆಗಳು ಸಚಿವರು ದಯಮಾಡಿ ಪರಿಶೀಲನೆ ಮಾಡಬೇಕು.

ಶ್ರೀ ಹೆಚ್. ಎಸ್. ಶಂಕರಲಿಂಗೇಗೌಡ : ಮಾನ್ಯ ಅಧ್ಯಕ್ಷರೆ, ಪ್ರತಿಭೆಯುಳ್ಳ ಪ್ರತಿಭಾನ್ವಿತರ ಪುಸ್ತಕಗಳನ್ನು ಖರೀದಿ ಮಾಡುವಲ್ಲಿ ಸರ್ಕಾರ ವಿಫಲವಾಗಿದೆ. ಪುಸ್ತಕ ಖರೀದಿಸಲು ಸಮಿತಿ ರಚನೆ ಮಾಡಿದ್ದಾರೆ. ಯಾರೂ ತಿಳಿಯದಿರುವ ಕೆಳಮಟ್ಟದ ಪುಸ್ತಕವನ್ನು ಖರೀದಿಸಿ ಮಕ್ಕಳ ಜ್ಞಾನಕ್ಕೆ ಅಂಧಕಾರವನ್ನು ಉಂಟುಮಾಡತಕ್ಕ ಪರಿಸ್ಥಿತಿ ಬಂದಿದೆ. ಪರಿಣತಿ ಹೊಂದಿರತಕ್ಕಂಥವರು ಪಕ್ವವಾಗಿರುವ ವಿಷಯವುಳ್ಳ ಪುಸ್ತಕಗಳನ್ನು ಕೊಂಡುಕೊಳ್ಳಲು ಸರ್ಕಾರ ಮುಂದಾಗಬೇಕೆಂದು ಕಳಕಳಿಯಿಂದ ಪ್ರಾರ್ಥಿಸಿಕೊಳ್ಳುತ್ತೇನೆ.

ಅಧ್ಯಕ್ಷರು : ತಮ್ಮ ಕಳಕಳಿಯನ್ನು ಗುರುತಿಸಲಾಗಿದೆ.

ತುಮಕೂರು ಜಿಲ್ಲೆಯಲ್ಲಿ ಕಿರಿಯ ಕಾಲೇಜುಗಳಿಗೆ ಕಟ್ಟಡಗಳು

545 - ಶ್ರೀ ಎಸ್.ಪಿ. ಮುದ್ದಹನುಮೇಗೌಡ (ಕುಣಿಗಲ್) : ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಮಕೂರು ಜಿಲ್ಲೆಯಲ್ಲಿ ಸ್ವಂತ ಕಟ್ಟಡವಿಲ್ಲದೆ ಇರುವ ಜೂನಿಯರ್ ಕಾಲೇಜುಗಳೆಷ್ಟು?

ಆ) ಕುಣಿಗಲ್ ವಿಧಾನಸಭೆ ಕ್ಷೇತ್ರದ ವ್ಯಾಪ್ತಿಯಲ್ಲಿ ಅಂತಹ ಕಾಲೇಜುಗಳೆಷ್ಟು?

ಇ) ಈ ಬಗ್ಗೆ ಸರ್ಕಾರದ ಕ್ರಮವೇನು?

ಶ್ರೀ ಹೆಚ್.ಜಿ. ಗೋವಿಂದ ಗೌಡ (ಶಿಕ್ಷಣ ಸಚಿವರು) :

ಅ) ತುಮಕೂರು ಜಿಲ್ಲೆಯಲ್ಲಿ 43 ಸರ್ಕಾರಿ ಸಂಯುಕ್ತ ಪದವಿ ಪೂರ್ವ ಕಾಲೇಜುಗಳಿದ್ದು 42 ಕಾಲೇಜುಗಳು ಪ್ರೌಢಶಾಲಾ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿವೆ. ಒಂದು ಕಾಲೇಜಿಗೆ ಸ್ವಂತ ಕಟ್ಟಡವಿದೆ ಇದೇ ಜಿಲ್ಲೆಯಲ್ಲಿ 3 ಸ್ವತಂತ್ರ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಿವೆ. 2 ಕಾಲೇಜುಗಳಿಗೆ ಸ್ವಂತ ಕಟ್ಟಡವಿದೆ. ಇನ್ನೊಂದು ಕಾಲೇಜಿಗೆ ಕಟ್ಟಡ ನಿರ್ಮಾಣ ನಡೆಯುತ್ತಿದೆ.

ಆ) ಸರ್ಕಾರಿ ಸಂಯುಕ್ತ ಪದವಿ ಪೂರ್ವ ಕಾಲೇಜುಗಳು - 5 ಸರ್ಕಾರಿ ಸ್ವತಂತ್ರ ಪದವಿ ಪೂರ್ವ ಕಾಲೇಜುಗಳಿಲ್ಲ.

ಇ) ಸರ್ಕಾರಿ ಪದವಿ ಪೂರ್ವ ಕಾಲೇಜುಗಳಿಗೆ ಸ್ಥಳಾವಕಾಶದ ಅಗತ್ಯತೆ ಇರುವಲ್ಲಿ ಅಯವ್ಯಯದ ಲಭ್ಯತೆಗೆ ಒಳಪಟ್ಟು ಹೆಚ್ಚಿವರಿ ಕೊಠಡಿಗಳನ್ನು ಹಂತ ಹಂತವಾಗಿ ನಿರ್ಮಾಣ ಮಾಡಲಾಗುವುದು.

ಶ್ರೀ ಎಸ್. ಪಿ. ಮುದ್ದಹನುಮೇಗೌಡ (ಕುಣಿಗಲ್) : ಮಾನ್ಯ ಸಭಾಧ್ಯಕ್ಷರೆ, ನನ್ನ ಪ್ರಶ್ನೆ ಬಂದು ಈ ಜ್ಯೂನಿಯರ್ ಕಾಲೇಜುಗಳಿಗೆ ಕಟ್ಟಡವನ್ನು ಕೊಡತಕ್ಕದ್ದು, ಸಂಯುಕ್ತ ಪದವಿ ಪೂರ್ವ ಕಾಲೇಜುಗಳಲ್ಲಿ ಅಂದರೆ ಹೈಸ್ಕೂಲ್‌ನಲ್ಲಿ ಕಟ್ಟಡಗಳು ಇರುತ್ತವೆ, ಅದರಲ್ಲೇ ಜ್ಯೂನಿಯರ್ ಕಾಲೇಜುಗಳ ಮಕ್ಕಳು ಓದುತ್ತಾರೆ. ಈಗ ಏನಾಗಿದೆ ಅಂದರೆ ಹೈಸ್ಕೂಲ್‌ಗೆ ಸರಿಯಾದ ಸಂಖ್ಯೆಯಲ್ಲಿ ಕಟ್ಟಡಗಳನ್ನು ಒದಗಿಸಲಿಕ್ಕೆ ಆಗುತ್ತಿಲ್ಲ, ಅದರಲ್ಲೂ ನೀವು ಕಾಲೇಜುಗಳಿಗೆ ಸ್ವಂತ ಕಟ್ಟಡಗಳನ್ನು ಕೊಡದೇ ಹೋದರೆ, ಇವತ್ತು ನೀವು ಏನು ಶಿಕ್ಷಣ ಗುಣಮಟ್ಟವನ್ನು ಸುಧಾರಿಸಬೇಕು ಎಂದು ಇದ್ದೀರಿ, ಅದರಲ್ಲಿ ಸ್ವಂತವಾದ ಕಟ್ಟಡವನ್ನು ಸಹ ಒದಗಿಸುವುದು ಒಂದು ಎಂದು ನಾನು ಭಾವಿಸಿದ್ದೇನೆ. ಇನ್ನು ಸರ್ಕಾರಿ ಪದವಿಪೂರ್ವ ಕಾಲೇಜುಗಳಿಗೆ ಸ್ಥಳಾವಕಾಶದ ಅಗತ್ಯತೆ ಇರುವಲ್ಲಿ ಆಯವ್ಯಯದ ಲಭ್ಯತೆಗೆ ಒಳಪಟ್ಟು ಹೆಚ್ಚುವರಿ ಕೊಠಡಿಗಳನ್ನು ಹಂತ ಹಂತವಾಗಿ ನಿರ್ಮಾಣ ಮಾಡಲಾಗುವುದು ಎಂದು ನಿಮ್ಮ ಉತ್ತರ ಏನಿದೆ, ಅದು ಅಷ್ಟು ಸಮಂಜಸವಾಗಿ ಕಾಣಲಿಲ್ಲ. ಆದುದರಿಂದ ದಯಮಾಡಿ ತಾವು, ನಿಮ್ಮ ಇಲಾಖೆಯ ಬಗ್ಗೆ ಈ ರೀತಿಯ ಒಂದು ಉತ್ತರವನ್ನು ಕೊಡದಲೇ ಎಲ್ಲೆಲ್ಲಿ ಕಟ್ಟಡಗಳನ್ನು ಒದಗಿಸುವ ಅವಶ್ಯಕತೆ ಇದೆ, ಅಲ್ಲಿಗೆ ಹೆಚ್ಚಿಗೆ ಅನುದಾನವನ್ನು ಕೊಟ್ಟು ಕಟ್ಟಡಗಳನ್ನು ಕಟ್ಟಿಸಿಕೊಡಬೇಕೆಂದು ನನ್ನ ಮನವಿ.

ಶ್ರೀ ಹೆಚ್. ಜಿ. ಗೋವಿಂದೇಗೌಡ : ಮಾನ್ಯ ಸಭಾಧ್ಯಕ್ಷರೆ, ಸಂಯುಕ್ತ ಪದವಿಪೂರ್ವ ಕಾಲೇಜುಗಳು ಹೈಸ್ಕೂಲ್‌ಗಳಿಗೆ ಅಟ್ಯಾಚ್ ಆಗಿರುತ್ತವೆ. ನಮ್ಮ ಮಾನ್ಯ ಶಾಸಕ ಮಿತ್ರರ ಕ್ಷೇತ್ರದಲ್ಲಿ ಇಂಡಿಪೆಂಡೆಂಟ್ ಕಾಲೇಜುಗಳು ಯಾವುವು ಇಲ್ಲ. ಈಗಾಗಲೇ ಕಟ್ಟಡಗಳನ್ನು ಒದಗಿಸಿದ್ದೇವೆ. ಅವಶ್ಯಕತೆ ಇದ್ದರೆ, ಖಂಡಿತ ಅದನ್ನು ಮಾಡಲೇಬೇಕಾಗುತ್ತದೆ. ನಾವಾಗಲೇ ಹೈಸ್ಕೂಲ್‌ಗಳಿಗೆ ಜಿಲ್ಲಾ ಪಂಚಾಯತಿ ಮೂಲಕ ಹಣ ಒದಗಿಸತಕ್ಕ ವ್ಯವಸ್ಥೆಯನ್ನು ಮಾಡಿದ್ದೇವೆ. ಇನ್ನೂ ಸಹ ಅಂತಹ ಅವಶ್ಯಕತೆ ಇದ್ದ ಕಡೆಯಲ್ಲೆಲ್ಲಾ ಹೈಸ್ಕೂಲ್ ಮತ್ತು ಸಂಯುಕ್ತ ಪದವಿಪೂರ್ವ ಕಾಲೇಜು ಮಾಡುವುದಕ್ಕೆ ಸರ್ಕಾರ ಕ್ರಮ ಕೈಗೊಳ್ಳುತ್ತದೆ.

ವಿಟ್ಲಾದಲ್ಲಿ ಪ್ರಥಮ ದರ್ಜೆ ಕಾಲೇಜಿಗೆ ಕಟ್ಟಡ

546 - ಶ್ರೀ ಎ. ರುಕ್ಮಯ್ಯ ಪೂಜಾರಿ (ವಿಟ್ಲ) : ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಆ) *ವಿಟ್ಲ ಪ್ರಥಮ ದರ್ಜೆ ಕಾಲೇಜಿಗೆ ಸ್ವಂತ ಕಟ್ಟಡ ಇಲ್ಲದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*